ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 113/2023

ಫಿರ್ಯಾದಿ ಆರೋಪಿ

ದಿ ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪ್ ಲಿ. ವಿರುದ್ಧ ಮಹಮ್ಮದ ಯಾಕೂಬ್ ಸಾಬ
ಕಾರವಾರ, ಶಾಖೆ ಕುಮಟಾ.

ಆರೋಪಿಃ

ಮಹಮ್ಮದ ಇಲಿಯಾಸ್ ಯಾಕೂಬ ಸಾಬ,
55 ವರ್ಷ, ಬಿಸಿನೆಸ್, ಸಾಃ ಕಾಗಾಲ ಹುಬ್ಬಣಗೇರಿ ,
ತಾಃ ಕುಮಟಾ.

– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ದಿಃ 03-05-2017 ರಂದು ನೀವು ಫಿರ್ಯಾದುದಾರ ಸಹಕಾರಿಯಿಂದ ರೂ. 80,000/- ಸಾಲವನ್ನು ಪಡೆದಿದ್ದು, ಸದರಿ ಸಾಲವು ಕಟ್ ಬಾಕಿಯಾಗಿರುವುದರಿಂದ ಸದರಿ ಸಾಲದ ತೀರುವಳಿಯ ಸಲುವಾಗಿ ನೀವು ದಿಃ 16-11-2019 ರಂದು ಫಿರ್ಯಾದುದಾರ ಸಹಕಾರಿಗೆ ನಿಮ್ಮ ಖಾತೆ ಇರುವ ಎಸ್ ಬಿ ಐ, ಕುಮಟಾ ಶಾಖೆ ಇದರ ಚೆಕ್ ನಂ. 616633 ನ್ನು ರೂ. 1,03,000/- ಕ್ಕೆ ನೀಡಿದ್ದು, ಸದರಿ ಚೆಕ್ ನ್ನು ನಗದೀಕರಿಸಲು ಅವರ ಬ್ಯಾಂಕರರಿಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯನ್ನು ತಡೆಹಿಡಿಯುವಂತೆ ಪೆಮೆಂಟ್ ಸ್ಟೊಪಡ್ ಬೈ ಡ್ರೊವರ್ ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿದ್ದು, ಈ ಕುರಿತು ನಿಮಗೆ ದಿಃ 09-12-2019 ರಂದು ವಕೀಲರ ಮುಖಾಂತರ ಅಂಚೆ ನೋಟಿಸು ನೀಡಿದ್ದು, ಸದರಿ ನೋಟಿಸು ನಿಮಗೆ ದಿಃ 14-12-2019 ರಂದು ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ ಕಲಂ 138 ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ –

**ಪ್ರಶ್ನೆ - 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 30-01-2024.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ